# ಆಸ್ತಮಾ ಗುಣಪಡಿಸಬಹುದು!

ಆಸ್ತಮಾ ಉಸಿರಾಟಕ್ಕೆ ಸಂಬಂಧಿಸಿದ ಸಮಸ್ಯೆ. ಇದು ಆನುವಂಶೀಯವಾಗಿಯೂ ಬರಬಹುದು. ಜೈವಿಕ ಕ್ರಿಯೆಗೆ ಪ್ರತಿಫಲನವಾಗಿ ವೈಯಕ್ತಿಕ ಸೂಕ್ಷ್ಮ ದೇಹ ಪ್ರಕೃತಿಯಿಂದ ಬರುವಂತದ್ದೂ ಆಗಿರಬಹುದು. ಅಲ್ಲದೆ ಅಲರ್ಜಿ ಉಂಟು ಮಾಡುವ ವಸ್ತುಗಳು ಹಾಗೂ ಹಲವಾರು ಕಾಯಿಲೆಗಳ ಪರಿಣಾಮದಿಂದಾಗಿ ಉದ್ಭವಿಸಲೂಬಹುದು. ಆದರೆ ಈ ಸಮಸ್ಯೆಯನ್ನು ಸಂಪೂರ್ಣ ಗುಣಪಡಿಸಬಹುದು.

■ ಡಾ.ಬಿ.ಟಿ.ರುದ್ರೇಶ್



ಯಾವುದೇ ಕೆಲಸವನ್ನು ಸುಲಭವಾಗಿ ಮಾಡಿದಾಗ ಆ ಕೆಲಸ 'ನೀರು ಕುಡಿದಂತಿತ್ತು' ಎಂಬ ಮಾತನ್ನು ಕೇಳುತ್ತಲೇ ಇರುತ್ತೇವೆ. ಆದರೆ ನೀರು ಕುಡಿಯುವುದಕ್ಕಿಂತ ಸುಲಭವಾದ ಕೆಲಸ 'ಉಸಿರಾಟ. ಮನುಷ್ಯ ಹುಟ್ಟಿದಾಗಿನಿಂದ ಕೊನೆಯ ಉಸಿರಿರುವವರೆಗೂ ಯಾವುದೇ ಪ್ರಯತ್ನವಿಲ್ಲದೆ ತಾನಾಗೇ ನಡೆಯುವ ಪ್ರಕ್ರಿಯೆ ಅದು. ಉಸಿರಾಡುವುದೇ ಕಷ್ಟ ಎಂಬ ಪರಿಸ್ಥಿತಿ ಎದುರಾದಾಗ ಅದರ ಬೆಲೆ ಏನು ಎನ್ನುವುದು ನಮ್ಮ ಅರಿವಿಗೆ ಬರುತ್ತದೆ.

ಬೆಂಗಳೂರನ್ನು ದಕ್ಷಿಣ ಏಷ್ಯಾದ ಆಸ್ತಮಾ ರಾಜಧಾನಿ ಎನ್ನಲಾಗುತ್ತಿದೆ. ವೈದ್ಯವಿಜ್ಞಾನದಲ್ಲಿ ಅಗಾಧ ಪ್ರಗತಿ ಸಾಧಿಸಿರುವ ಜಾಗಟೆ ಸದ್ದು ಆಗಿಂದಾಗ್ಗೆ ಕೇಳುತ್ತಿದ್ದರೂ ಅಸಂಖ್ಯಾತ ಜನರಿಗೆ ಆಸ್ತಮಾದಿಂದ ಮುಕ್ತಿ ಸಿಕ್ಕಿಲ್ಲ. ಅದೆಷ್ಟೋ ಮಂದಿಗೆ ಸುಲಭವಾಗಿ ಉಸಿರಾಡುವುದಕ್ಕೂ ಬೆಂಗಳೂರಿನ ವಾತಾವರಣ ಅನುಕೂಲಕರ ಆಗಿಲ್ಲ. ಇದರ ಮೂಲ ಆಧುನಿಕ ಬದುಕು ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಆಗುತ್ತಿರುವ ಪರಿಸರ ವಿನಾಶದಲ್ಲಿ ಅಡಗಿದೆ.

ವಾಸ್ತವದಲ್ಲಿ ಆಸ್ತಮಾ ಒಂದು ಕಾಯಿಲೆಯಲ್ಲ. ಅದು ಕೇವಲ ಒಳಗಿರುವ ಕಾಯಿಲೆಯ ಅಭಿವ್ಯಕ್ತಿ. ಇದು ಅನುವಂಶೀಯವಾಗಿಯೂ ಬರಬಹುದು. ಜೈವಿಕ ಕ್ರಿಯೆಗೆ ಪ್ರತಿಫಲನವಾಗಿ ವೈಯಕ್ತಿಕ ಸೂಕ್ಷ್ಮ ದೇಹ ಪ್ರಕೃತಿಯಿಂದ ತರಿಸಿಕೊಳ್ಳುವಂತದ್ದೂ ಆಗಿರಬಹುದು ಮತ್ತು ಅಲರ್ಜಿ ಉಂಟು ಮಾಡುವ ವಸ್ತುಗಳು ಹಾಗೂ ಹಲವಾರು ಕಾಯಿಲೆಗಳ ಪರಿಣಾಮದಿಂದಾಗಿ ಉದ್ಭವಿಸಲೂಬಹುದು.

ಶ್ವಾಸಕೋಶಕ್ಕೆ ಸಂಬಂಧಿಸಿದ ಎಲ್ಲ ಕಾಯಿಲೆಗಳನ್ನು ಹೋಮಿಯೋಪತಿಯಲ್ಲಿ ತ್ರಿವಿಧ ದೋಷಗಳೆಂಬ ಮೂಲಭೂತ ಕಾಯಿಲೆಗಳಾಗಿ ವರ್ಗೀಕರಣ ಮಾಡಲಾಗಿದೆ. ಮೊದಲನೆಯದು ಸೋರಾ. ಇಲ್ಲಿ ಯಾವುದೇ ಜೀವಕೋಶಗಳ ಬದಲಾವಣೆಯಾಗಿರುವುದಿಲ್ಲ. ಕೇವಲ ಕಾರ್ಯಕ್ರಿಯೆಯಲ್ಲಿ ಮಾತ್ರ ವ್ಯತ್ಯಾಸವಾಗಿರುತ್ತದೆ. ಸಾಮಾನ್ಯವಾಗಿ ಮಾನಸಿಕ ಕಾರಣಗಳಿಂದ ಕಾಣಿಸಿಕೊಂಡಿರುತ್ತದೆ. ಎರಡನೆಯದು ಸೈಕೋಸಿಸ್. ಇದು ದೀರ್ಘಾವಧಿಯದಾಗಿದ್ದು ನೀರಿನಲ್ಲಿ ಹೆಚ್ಚಾಗಿ ಕೆಲಸ ಮಾಡುವವರಲ್ಲಿ ಕಾಣಿಸಿಕೊಳ್ಳುತ್ತದೆ. ಮಳೆಗಾಲದಲ್ಲಿ ಜಾಸ್ತಿಯಾಗುತ್ತದೆ ಹಾಗೂ ಹಲವಾರು ವರ್ಷಗಳು ಕಾಡಿರಬಹುದಾದ ರೀತಿಯದ್ದಾಗಿರುತ್ತದೆ. ಮೂರನೆಯದು ಸಿಫಿಲಿಟಿಕ್. ಇದು ಸಾಮಾನ್ಯವಾಗಿ ಬೇಸಿಗೆಯಲ್ಲಿ ಬರುವಂಥದ್ದು. ಇಂಥ ಪ್ರಕರಣಗಳಲ್ಲಿ ಶ್ವಾಸಕೋಶಗಳ ಜೀವಕೋಶ ವಿರೂಪಗೊಂಡಿರುತ್ತದೆ.

ಆಸ್ತಮಾ ದೂಳಿನಿಂದ ಬರಬಹುದು, ಯಾವುದೇ ಋತುವಿನಲ್ಲಿ ಬರಬಹುದು, ಕೆಲವರಲ್ಲಿ ಹಗಲಿನಲ್ಲಿ ಅಥವಾ ರಾತ್ರಿಯಲ್ಲಿ ಮಾತ್ರ ಕಾಣಿಸಿಕೊಳ್ಳಬಹುದು. ಕಾರ್ಯಕ್ರಿಯೆಯಲ್ಲಿ ಆಗುವ ವ್ಯತ್ಯಾಸದಿಂದ

